# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಧು ಜಿ.ಮಾದೇಗೌಡ<br>(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 122 (1066) |
| ಉತ್ತರಿಸಬೇಕಾದ ದಿನಾಂಕ | : | 22.09.2022 |
| ಉತ್ತರಿಸುವ ಸಚಿವರು | : | ಮುಖ್ಯ ಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2010-11ನೇ ಸಾಲಿನಿಂದ ಇದುವರೆವಿಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ಕಛೇರಿಯಲ್ಲಿ ನಡೆದಿದೆ ಎನ್ನಲಾದ ಹಣ ದುರುಪಯೋಗದ ಒಟ್ಟು ಮೊತ್ತ ಎಷ್ಟು; | ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ , ಮಂಡ್ಯ ಇವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಛೇರಿಯ ಲೆಕ್ಕಪತ್ರಗಳ ಬಗ್ಗೆ 2010-11 ರಿಂದ 2019-20ನೇ ಸಾಲಿನವರೆಗೆ ಕೈಗೊಂಡ ತಪಾಸಣೆಯಲ್ಲಿ ಕಂಡುಬಂದಿರುವ ಮಾಹಿತಿಯ ಅನುಸಾರ ಒಟ್ಟು ರೂ.3,51,25,729/- ಹಣ ದುರುಪಯೋಗ ವಾಗಿರುವುದು ಕಂಡು ಬಂದಿರುತ್ತದೆ. |
| ಆ) | ಹಣ ದುರುಪಯೋಗ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳ / ನೌಕರರ ವಿವರ; ದುರುಪಯೋಗ ಪಡಿಸಿಕೊಂಡ ಹಣದ ಮೊತ್ತ; ಯಾವ ವರ್ಷ ಎಷ್ಟು ಮೊತ್ತ ದುರುಪಯೋಗ ವಾಗಿದೆ ಎಂಬುದರ ಬಗ್ಗೆ ವಿವರ ನೀಡುವುದು; | ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ ನೌಕರರುಗಳ ವಿವರವನ್ನು **ಅನುಬಂಧ-1** ರಲ್ಲಿ ಹಾಗೂ ದುರುಪಯೋಗಪಡಿಸಿಕೊಂಡ ಹಣದ ಮೊತ್ತದ ವರ್ಷವಾರು ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಇ) | ಹಣ ದುರುಪಯೋಗಪಡಿಸಿಕೊಂಡ ಎಷ್ಟು ಅಧಿಕಾರಿಗಳು / ನೌಕರರು ನಿವೃತ್ತಿ ಹೊಂದಿದ್ದಾರೆ; (ವಿವರ ನೀಡುವುದು) | ನಿವೃತ್ತಿ ಹೊಂದಿರುವ ಅಧಿಕಾರಿ / ನೌಕರರ ವಿವರಗಳು ಈ ಕೆಳಕಂಡಂತಿದೆ: |

| ಕ್ರ. ಸಂ. | ಅಧಿಕಾರಿ / ನೌಕರರ ಹೆಸರು & ಪದನಾಮ | ನಿವೃತ್ತಿ ಹೊಂದಿದ ದಿನಾಂಕ |
|---|---|---|
| 1. | ಪ್ರಕಾಶ್ ಗೋಪಾಲಕೃಷ್ಣ ಪವಾರ್, ಕಾ.ಇಂ. | 30.04.2019 |
| 2. | ಕುಮಾರ್, ಕಾ.ಇಂ.(ಪ್ರ) | 30.09.2021 |
| 3. | ಎಸ್.ವಿ.ಪದ್ಮನಾಭ, ಕಾ.ಇಂ. | 31.05.2022 |
| 4. | ಆನಂದ್‌ಕುಮಾರ್ ವಿ. ಪಿ., ಲೆಕ್ಕಾಧೀಕ್ಷಕರು | 31.05.2022 |

| | | |
|---|---|---|
| ಈ) | ಹಣ ದುರುಪಯೋಗಪಡಿಸಿಕೊಂಡ ಅಧಿಕಾರಿಗಳು / ನೌಕರರ ವಿರುದ್ಧ ಕೈಗೊಂಡ ಕ್ರಮಗಳು ಹಾಗೂ ದುರುಪಯೋಗಪಡಿಸಿಕೊಂಡ ಹಣ ವಸೂಲಾತಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಹಣ ದುರುಪಯೋಗಪಡಿಸಿಕೊಂಡ ಒಟ್ಟು 10 ಜನ ಅಧಿಕಾರಿ / ನೌಕರರುಗಳ ವಿರುದ್ಧದ ಆರೋಪಗಳ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರಿಕ ಸೇವಾ (ವ.ನಿ.ಮೇ.) ನಿಯಮಗಳ ನಿಯಮ 11ರ ಅಡಿಯಲ್ಲಿ ಕೈಗೊಂಡು ದಿ:29.01.2022ರ ಆದೇಶದಲ್ಲಿ ಶ್ರೀ ಜಿ.ಎಸ್. ಸೋಮಶೇಖರ್, ನಿವೃತ್ತ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸ ಲಾಗಿರುತ್ತದೆ. ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ.<br><br>ವಿಚಾರಣಾಧಿಕಾರಿಯವರಿಂದ ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ ಕ್ರಮ ವಹಿಸಲಾಗುವುದು. ಅಲ್ಲದೆ, ವಿಭಾಗ ಕಛೇರಿಯ ಅನುದಾನಕ್ಕೆ ಸಂಬಂಧಿಸಿದಂತೆ, ವಿವಿಧ ಬ್ಯಾಂಕ್ ಖಾತೆಯಲ್ಲಿ ಜಮೆಯಾಗಿದ್ದ ಹಣವನ್ನು ಬ್ಯಾಂಕ್ ಸಿಬ್ಬಂದಿಗಳು ಪ್ರಚಲಿತ ಆದೇಶ / ನಿಯಮಗಳಿಗೆ ವಿರುದ್ಧವಾಗಿ ವೈಯಕ್ತಿಕ ಖಾತೆಗಳಿಗೆ ವರ್ಗಾಯಿಸಿ ಗಂಭೀರ ಸ್ವರೂಪದ ಲೋಪವೆಸಗಿದ್ದಾರೆ. ಆದ್ದರಿಂದ ಸದರಿ ಮೊತ್ತವನ್ನು ಸರ್ಕಾರಕ್ಕೆ ಮರುಪಾವತಿಸುವ ಸಂಬಂಧ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಕಾರ್ಪೊರೇಷನ್ ಬ್ಯಾಂಕ್, ಮಂಡ್ಯ ಶಾಖೆ ಇವರುಗಳ ವಿರುದ್ಧ ಕರ್ನಾಟಕ ರಾಜ್ಯ ಗ್ರಾಹಕರ ವಿವಾದ ಪರಿಹಾರ ಆಯೋಗ, ಬೆಂಗಳೂರು ಇಲ್ಲಿ ಪ್ರಕರಣವನ್ನು ದಾಖಲಿಸಲಾಗಿರುತ್ತದೆ.<br><br>ಮುಂದುವರೆದು ಸದರಿ ಪ್ರಕರಣದ ಕುರಿತು ಮಂಡ್ಯ ನಗರ ವ್ಯಾಪ್ತಿಯ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ: 0171/2019 ಅನ್ನು ನಾಗರಾಜ್ ಹೆಚ್. ಎಲ್., ಗ್ರೂಪ್ ಡಿ ನೌಕರ ಇವರ ವಿರುದ್ಧ ದಾಖಲಿಸಲಾಗಿದೆ. ಏತನ್ಮಧ್ಯೆ ಸದರಿಯವರು ದಿ: 08.05.2022ರಂದು ಮೃತರಾಗಿದ್ದಾರೆ. |

--3

| | | |
|---|---|---|
| | | ಜೊತೆಗೆ ಸದರಿ ಪ್ರಕರಣದಲ್ಲಿ ಇತರೆ ಅಧಿಕಾರಿ / ನೌಕರರುಗಳು ಸಹ ಭಾಗಿಯಾಗಿರುವುದು ಕಂಡು ಬಂದ ಕಾರಣ ಸದರಿಯವರುಗಳ ವಿರುದ್ಧವು ಸಹ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಕೋರಲಾಗಿದೆ. ಈಗಾಗಲೇ ಪ್ರಕರಣ ಸಂಖ್ಯೆ: 0171/2019 ಐ.ಪಿ.ಸಿ. ಕಲಂ 408, 409, 465, 468, 417 ಹಾಗೂ 420 ರಡಿ ದಾಖಲಾಗಿರುವುದರಿಂದ ಉಳಿದವರಿಗೂ ಸಂಬಂಧಿಸಿದಂತೆ ಅದೇ ಪ್ರಕರಣದಡಿ ತನಿಖೆ ಅಳವಡಿಸಿಕೊಳ್ಳಲು ಪೊಲೀಸ್ ಇಲಾಖೆಗೆ ತಿಳಿಸಲಾಗಿದೆ. ಪ್ರಸ್ತುತ ಪ್ರಕರಣ ತನಿಖೆಯು ಪ್ರಗತಿಯಲ್ಲಿರುತ್ತದೆ. |

**ಗ್ರಾಅಪ 161 ಜಿಪಅ 2022**

**(ಬಸವರಾಜ ಬೊಮ್ಮಾಯಿ)**
ಮುಖ್ಯ ಮಂತ್ರಿ

## ಅನುಬಂಧ-1

| ಕ್ರ ಸಂ. | ಹೆಸರು & ಪದನಾಮ | ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ದಿನಾಂಕ & ಕರ್ತವ್ಯದಿಂದ ಬಿಡುಗಡೆಗೊಂಡ ದಿನಾಂಕಗಳ ವಿವರ |
|---|---|---|
| | **ಕಾರ್ಯಪಾಲಕ ಅಭಿಯಂತರರು** | |
| 1 | ಶ್ರೀ ಚಂದ್ರಹಾಸ<br>ಕಾರ್ಯಪಾಲಕ ಅಭಿಯಂತರರು, | 12-08-2014 ರಿಂದ 02-05-2017<br>(ಅಪರಾಹ್ನ) |
| 7 | ಶ್ರೀ ರಾಮಕೃಷ್ಣ,<br>ಕಾರ್ಯಪಾಲಕ ಅಭಿಯಂತರರು, (ಪ್ರಭಾರ),<br>ಗ್ರಾ.ಕು.ನೀ & ನೈ. ವಿಭಾಗ, ಮಂಡ್ಯ | 03-05-2017 (ಅಪರಾಹ್ನ) ರಿಂದ<br>21-05-2017 (ಅಪರಾಹ್ನ) |
| 8 | ಶ್ರೀ ಚಂದ್ರಹಾಸ<br>ಕಾರ್ಯಪಾಲಕ ಅಭಿಯಂತರರು, | 22-05-2017 (ಪೂರ್ವಾಹ್ನ) ರಿಂದ<br>07-09-2017 (ಪೂರ್ವಾಹ್ನ) |
| 9 | ಶ್ರೀ.ಎಸ್.ವಿ.ಪದ್ಮನಾಭ<br>ಕಾರ್ಯಪಾಲಕ ಅಭಿಯಂತರರು, | 07-09-2017 (ಪೂರ್ವಾಹ್ನ) ರಿಂದ<br>28-06-2018 (ಪೂರ್ವಾಹ್ನ) |
| 10 | ಶ್ರೀ ಪ್ರಕಾಶ್ ಗೋಪಾಲಕೃಷ್ಣ ಪವರ್,<br>ಕಾರ್ಯಪಾಲಕ ಅಭಿಯಂತರರು, | 28-06-2017 (ಪೂರ್ವಾಹ್ನ) ರಿಂದ<br>30-04-2019 (ಅಪರಾಹ್ನ) |
| 11 | ಶ್ರೀ ಕುಮಾರ್.ಎಸ್.<br>ಕಾರ್ಯಪಾಲಕ ಅಭಿಯಂತರರು, (ಪ್ರಭಾರ) | 30-04-2019 (ಅಪರಾಹ್ನ) ರಿಂದ<br>10-07-2019 (ಪೂರ್ವಾಹ್ನ) |
| 12 | ಶ್ರೀ ಎಸ್.ವಿ.ಪದ್ಮನಾಭ<br>ಕಾರ್ಯಪಾಲಕ ಅಭಿಯಂತರರು, | 10-07-2019 (ಪೂರ್ವಾಹ್ನ) ರಿಂದ<br>22-07-2019 (ಪೂರ್ವಾಹ್ನ) |
| 13 | ಶ್ರೀ ಚಂದ್ರಹಾಸ<br>ಕಾರ್ಯಪಾಲಕ ಅಭಿಯಂತರರು, | 22-07-2019 (ಪೂರ್ವಾಹ್ನ) ರಿಂದ<br>26-07-2019 (ಅಪರಾಹ್ನ) |
| 14 | ಶ್ರೀ ಎಸ್.ವಿ.ಪದ್ಮನಾಭ<br>ಕಾರ್ಯಪಾಲಕ ಅಭಿಯಂತರರು, | 26-07-2019 ರಿಂದ 07-07-2021<br>(ಪೂರ್ವಾಹ್ನ) |
| | **ಲೆಕ್ಕ ಪರಿಶೋಧಕರು / ಲೆಕ್ಕ ಅಧೀಕ್ಷಕರು,** | |
| 1 | ಶ್ರೀ ಕೆ.ಪುಟ್ಟಭೈರಯ್ಯ. (ಲೆ.ಪ.) | 26-06-2014 ರಿಂದ 30-06-2015 |
| 2 | ಶ್ರೀ ಆರ್.ರಾಜು. (ಲೆ.ಪ.) (ಪ್ರಭಾರ) | 30-06-2015 ರಿಂದ 07-10-2015 |
| 3 | ಶ್ರೀ ವಿ.ಪಿ.ಆನಂದ್ ಕುಮಾರ್.ಲೆ.ಅ | 07-10-2015 ರಿಂದ 30-10-2019 |
| | **ನಗದು ಸಹಾಯಕರು (ಕ್ಯಾಷಿಯರ್)** | |
| 1 | ಶ್ರೀ ಬಿ.ಆರ್.ಚಂದ್ರಶೇಖರ್ (ಪ್ರ.ದ.ಸ) | 16-07-2013 ರಿಂದ 14-06-2016 |
| 2 | ಶ್ರೀ ಲಕ್ಷ್ಮೀಕಾಂತ್.ಟಿ. (ದ್ವಿ.ದ.ಲೆ.ಸ) | 14-06-2016 ರಿಂದ 01-09-2016 |
| 3 | ಶ್ರೀ ಬಿ.ರಮೇಶ್, ಪ್ರ.ದ.ಸ. | 01-09-2016 ರಿಂದ 01-11-2019 |
| | **ಗ್ರೂಪ್ "ಡಿ" ನೌಕರರು** | |
| 1 | ದಿವಂಗತ ಹೆಚ್.ಎಲ್.ನಾಗರಾಜು | 25.05.2005 ರಿಂದ 13.12.2018 (ದಿನಾಂಕ 13.12.2018 ರಿಂದ ದಿನಾಂಕ 08.05.2020 ರವರೆಗೆ ಕೆ.ಆರ್.ಪೇಟೆ ಉಪವಿಭಾಗದಲ್ಲಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸಿ, ದಿನಾಂಕ:08.05.2020ರಂದು ಮರಣ ಹೊಂದಿರುತ್ತಾರೆ. |

## ಅನುಬಂಧ–2

| ಕ್ರ.ಸಂ | ಸಾಲು | ಕಾರ್ಯಪಾಲಕ ಅಭಿಯಂತರರ ಹೆಸರು | ಲೆಕ್ಕ ಆಧೀಕ್ಷಕರ ಹೆಸರು | ನಗದು ಸಹಾಯಕರ ಹೆಸರು | ಗ್ರೂಪ್ 'ಡಿ'ನೌಕರರ ಹೆಸರು | ಮೊತ್ತ |
|---|---|---|---|---|---|---|
| 1 | 2014–15 | ಚಂದ್ರಹಾಸ | ಮುಟ್ಟಭೈರಯ್ಯ | ಬಿ.ಆರ್ ಚಂದ್ರಶೇಖರ್ | ದಿ॥ ಹೆಚ್.ಎಲ್. ನಾಗರಾಜು | 299377.00 |
| 2 | 2015–16 | ಚಂದ್ರಹಾಸ | ಮುಟ್ಟಭೈರಯ್ಯ | ಬಿ.ಆರ್ ಚಂದ್ರಶೇಖರ್ | ದಿ॥ ಹೆಚ್.ಎಲ್. ನಾಗರಾಜು | 2053232.00 |
| | | | ರಾಜು.ಆರ್ | ಬಿ.ಆರ್ ಚಂದ್ರಶೇಖರ್ | ದಿ॥ ಹೆಚ್.ಎಲ್. ನಾಗರಾಜು | |
| | | | ವಿ.ಪಿ ಆನಂದಕುಮಾರ್ | ಲಕ್ಷ್ಮಿಕಾಂತ್ | ದಿ॥ ಹೆಚ್.ಎಲ್. ನಾಗರಾಜು | |
| 3 | 2016–17 | ಚಂದ್ರಹಾಸ | ವಿ.ಪಿ ಆನಂದಕುಮಾರ್ | ಬಿ.ರಮೇಶ್ | ದಿ॥ ಹೆಚ್.ಎಲ್. ನಾಗರಾಜು | 15615829.00 |
| 4 | 2017–18 | ಚಂದ್ರಹಾಸ | ವಿ.ಪಿ ಆನಂದಕುಮಾರ್ | ಬಿ.ರಮೇಶ್ | ದಿ॥ ಹೆಚ್.ಎಲ್. ನಾಗರಾಜು | 5260421.00 |
| | | ಎಸ್ ವಿ ಪದ್ಮನಾಭ | | | ದಿ॥ ಹೆಚ್.ಎಲ್. ನಾಗರಾಜು | |
| 5 | 2018–19 | ಎಸ್ ವಿ ಪದ್ಮನಾಭ | ವಿ.ಪಿ ಆನಂದಕುಮಾರ್ | ಬಿ.ರಮೇಶ್ | ದಿ॥ ಹೆಚ್.ಎಲ್. ನಾಗರಾಜು | 4386951.00 |
| | | ಪ್ರಕಾಶ್ ಗೋಪಾಲ ಕೃಷ್ಣ ಪವಾರ್ | | | ದಿ॥ ಹೆಚ್.ಎಲ್. ನಾಗರಾಜು | |
| 6 | 2019–20 | ಪ್ರಕಾಶ್ ಗೋಪಾಲ ಕೃಷ್ಣ ಪವಾರ್ | ವಿ.ಪಿ ಆನಂದಕುಮಾರ್ | ಬಿ.ರಮೇಶ್ | ದಿ॥ ಹೆಚ್.ಎಲ್. ನಾಗರಾಜು | 7509919.00 |
| | | ಎಸ್ ವಿ ಪದ್ಮನಾಭ | | | ದಿ॥ ಹೆಚ್.ಎಲ್. ನಾಗರಾಜು | |
| | | ಎಸ್.ಕುಮಾರ್ | | | ದಿ॥ ಹೆಚ್.ಎಲ್. ನಾಗರಾಜು | |
| **ಒಟ್ಟು** | | | | | | **35125729.00** |